# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 588 |
| ಸದಸ್ಯರ ಹೆಸರು | : ಡಾ॥ ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 14.08.2025 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಭಾಲ್ಕಿ ತಾಲೂಕಿನ ಜಿರಗಿಹಾಳ್ ಗ್ರಾಮದಲ್ಲಿ 2002ರಲ್ಲಿ ನಿರ್ಮಿಸಲಾಗಿರುವ ಬ್ಯಾರೇಜ್ ಕಾಮಗಾರಿ ಈವರೆಗೆ ಎಷ್ಟು ಪ್ರಮಾಣದಲ್ಲಿ ಪೂರ್ಣಗೊಂಡಿದೆ ಮತ್ತು ಎಷ್ಟು ಪ್ರಮಾಣದ ಕಾಮಗಾರಿಯು ಬಾಕಿಯಿದೆ: ಕಾಮಗಾರಿ ವಿಳಂಬಕ್ಕೆ ಕಾರಣವೇನು: | ಜೀರಗ್ಯಾಳ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ಟೆಂಡರ್ ಆಧಾರದ ಮೇಲೆ ದಿನಾಂಕ:06.06.2006ರಲ್ಲಿ ಗುತ್ತಿಗೆ ವಹಿಸಲಾಗಿದ್ದು, ದಿನಾಂಕ:20.12.2012ರಂದು ಪೂರ್ಣಗೊಳಿಸಲಾಗಿದೆ. ಸದರಿ ಕಾಮಗಾರಿಗೆ ರೂ.57.02 ಕೋಟಿ ವೆಚ್ಚವಾಗಿದ್ದು, ಯಾವುದೇ ಹಣ ಬಿಡುಗಡೆ ಮಾಡುವ ಪ್ರಸ್ತಾವನೆ ಇರುವುದಿಲ್ಲ. |
| ಆ) | ಈ ಯೋಜನೆಯು ಎಷ್ಟು ಮೊತ್ತದ ಅಂದಾಜಿನ ಯೋಜನೆಯಾಗಿದೆ. ಇದುವರೆಗೆ ಸರ್ಕಾರ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ: ಅದರಲ್ಲಿ ಎಷ್ಟು ಹಣ ಖರ್ಚಾಗಿದೆ: ಉಳಿದ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆಯೇ: | |
| ಇ) | ಈ ಯೋಜನೆಯ ಸಲುವಾಗಿ ಎಷ್ಟು ಎಕರೆ ಭೂಮಿಯನ್ನು ಬಳಸಿಕೊಳ್ಳಲಾಗಿದೆ. ಅದಕ್ಕಾಗಿ ರೈತರಿಗೆ ಒಟ್ಟು ಎಷ್ಟು ಪರಿಹಾರ ಹಣ ನೀಡಲಾಗಿದೆ. ಇನ್ನೂ ಎಷ್ಟು ರೈತರಿಗೆ ಪರಿಹಾರ ಹಣ ನೀಡಬೇಕಿದೆ. ಸರಿಯಾದ ಮೌಲ್ಯಮಾಪನದ ಮೇಲೆ ಪರಿಹಾರ ನೀಡಲಾಗಿದೆಯೆ: ಬ್ಯಾರೇಜಿನಲ್ಲಿ ಸ್ಥಾಪಿಸಲಾದ ಬಾಗಿಲುಗಳು ಸಂಪೂರ್ಣ ಕಾರ್ಯ ನಿರ್ವಹಿಸುತ್ತಿವೆಯೇ: (ಸಂಪೂರ್ಣ ವಿವರ ಒದಗಿಸುವುದು) | ಜೀರಗ್ಯಾಳ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕಾಗಿ ಭಾಲ್ಕಿ ತಾಲೂಕಿನ ಜೀರಗ್ಯಾಳ ಹಾಗೂ ಸಾಯಗಾಂವ ಗ್ರಾಮಗಳ ಒಟ್ಟು 18 ಎಕರೆ 21 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಜೆನರಲ್ ಮ್ಯಾನೇಜರ್, ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ, ಕೃ.ಮೇ.ಯೋ., ನವನಗರ, ಬಾಗಲಕೋಟೆ ರವರು ಭೂಸ್ವಾಧೀನ ಅವಧಿಯಲ್ಲಿ, ಅಂದಿನ ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ಮೌಲ್ಯಮಾಪನ ಮಾಡಿ, ಒಟ್ಟು ರೂ.10,19,566.00 ಪರಿಹಾರ ಮೊತ್ತವನ್ನು ರೈತರಿಗೆ ಪಾವತಿಸಲಾಗಿರುತ್ತದೆ.<br><br>ಸದರಿ ಬ್ಯಾರೇಜ್‌ನಲ್ಲಿ ಅಳವಡಿಸಲಾದ ಸ್ವಯಂಚಾಲಿತ ಗೋಡಬೋಲೆ ಗೇಟುಗಳಿಂದ ನೀರು ಸೋರಿಕೆಯಾಗುತ್ತಿವೆ. |
| ಈ) | ಜೀರಗಿಹಾಳ್ ಈ ಬ್ಯಾರೇಜಿನಿಂದ ಹಿನ್ನೀರು ನಿಲ್ಲುವಲ್ಲಿ ಸಹಾಯವಾಗಲು ಸರ್ಕಾರ ಧೃಢಪಡಿಸಿದೆಯೇ: ಈ ಮೂಲಕ ಸಿಂಚನಕ್ಕೆ ನಿರ್ವಹಣಾ ನದಿ ಜಲ ಲಭ್ಯವಿದೆಯೇ: ಈ ಯೋಜನೆಯಿಂದ ಎಷ್ಟು ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಪ್ರಸ್ತುತ ಎಷ್ಟು ಪ್ರದೇಶಕ್ಕೆ ಸಿಂಚನ ಸಾಧ್ಯವಾಗುತ್ತಿದೆ. | ಜೀರಗ್ಯಾಳ ಬ್ರಿಡ್ಜ ಕಂ ಬ್ಯಾರೇಜ್‌ನ ಹಿನ್ನೀರಿನಲ್ಲಿ ಒಟ್ಟು 0.128 ಟಿ.ಎಂ.ಸಿ. ನೀರು ಸಂಗ್ರಹಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ ಬ್ಯಾರೇಜಿನಲ್ಲಿ ಸಂಗ್ರಹವಾಗುವ ಹಿನ್ನೀರನ್ನು ರೈತರು ತಮ್ಮ ಸ್ವಂತ ಪಂಪ್ ಸೆಟ್ ಅಳವಡಿಸಿಕೊಂಡು, ನೀರಾವರಿ ಬಳಸಿಕೊಳ್ಳುವ ಯೋಜನೆಯಾಗಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಉ) | ಈ ಬ್ಯಾರೇಜ್ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಲು ಸರ್ಕಾರ ಯಾವುದಾದರೂ ತಾಂತ್ರಿಕ ತಂಡ ಅಥವಾ ಸಂಸ್ಥೆಯಿಂದ ಮೌಲ್ಯಮಾಪನ ವರದಿ ಪಡೆದಿದೆಯೇ ಅದರಲ್ಲಿ ಸೂಚಿಸಿರುವ ದೋಷಗಳು ಯಾವುವು: ಈ ದೋಷಗಳನ್ನು ಸರಿಪಡಿಸಲಾಗಿದೆಯೇ: (ಸಂಪೂರ್ಣ ವಿವರ ಒದಗಿಸುವುದು) | ಬ್ಯಾರೇಜಿನ ನಿರ್ಮಾಣ ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿದ್ದು, ಕಾಮಗಾರಿಯ ನಿರ್ಮಾಣ ಹಂತದಲ್ಲಿಯೇ ಗುಣಮಟ್ಟವನ್ನು ಪರಿಶೀಲಿಸಲಾಗಿರುತ್ತದೆ. ಪ್ರಸ್ತುತ, ಬ್ಯಾರೇಜ್‌ನ ಗೋಡಬೋಲೆ ಗೇಟುಗಳ ಕೆಳಗೆ ನೀರು ಸೋರಿಕೆಯಾಗುತ್ತಿದ್ದು, ಬ್ಯಾರೇಜಿನ ಪೂರ್ಣ ಸಾಮರ್ಥ್ಯದಷ್ಟು ನೀರು ಶೇಖರಿಸಲು ಸಾಧ್ಯವಾಗುತ್ತಿಲ್ಲ.<br><br>ಆದ್ದರಿಂದ, ಸದರಿ ನ್ಯೂನ್ಯತೆಯನ್ನು ಪರಿಶೀಲಿಸಲು ನಿಗಮದ ತಾಂತ್ರಿಕ ಸಲಹೆಗಾರರ ತಂಡವನ್ನು ರಚಿಸಿ ಪರಿವೀಕ್ಷಣೆ ಕೈಗೊಳ್ಳಲಾಗಿದ್ದು, ಅದರಂತೆ, River Gorge ಭಾಗದಲ್ಲಿರುವ 20 ಗೋಡಬೊಲೆ ಗೇಟುಗಳನ್ನು ತೆಗೆದು vertical lift gates with mechanical hoisting ಅನ್ನು ಅಳವಡಿಸಲು ಉದ್ದೇಶಿಸಲಾಗಿದೆ.<br><br>ಅಲ್ಲದೇ, ಸದರಿ ಪ್ರಸ್ತಾವನೆಯು ಸೇರಿದಂತೆ ಬೀದರ್ ಜಿಲ್ಲೆಯಲ್ಲಿ ಮಾಂಜ್ರ ನದಿಗೆ ಅಡ್ಡಲಾಗಿ ಮಾಣಿಕೇಶ್ವರ, ಚಂದಾಪುರ, ಹಾಲಹಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್‌ಗಳ ಪುನ:ಶ್ಚೇತನದ ರೂ.151.70 ಕೋಟಿ ಮೊತ್ತದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಊ) | ಜೀರಗಿಹಾಳ್ ಬ್ಯಾರೇಜ್‌ನಲ್ಲಿ ನೂತನವಾಗಿ ಸ್ಥಾಪಿಸಲಾಗುತ್ತಿರುವ ಬ್ಯಾರೇಜ್ ಬಾಗಿಲುಗಳ ಗೇಟ್ಸ್ ಸ್ಥಾಪನೆಯ ಕುರಿತು ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ: ಇದ್ದಲ್ಲಿ, ಪ್ರಕ್ರಿಯೆ ಯಾವ ಹಂತದಲ್ಲಿದೆ. ಈ ಬಾಗಿಲುಗಳಿಗಾಗಿ ತಾಂತ್ರಿಕ ದೃಷ್ಟಿಯಿಂದ ಯಾವ ಕ್ರಮ ಕೈಗೊಳ್ಳಲಾಗಿದೆ. ಈ ಬಾಗಿಲುಗಳ ಸ್ಥಾಪನೆಗಾಗಿ ಸರ್ಕಾರ ಎಷ್ಟು ಮೊತ್ತದ ಅಂದಾಜು ವೆಚ್ಚ ನಿಗದಿಪಡಿಸಿದೆ; ಇದುವರೆಗೆ ಬಳಸಲಾಗಿರುವ ಹಣವೆಷ್ಟು? (ಮಾಹಿತಿ ಒದಗಿಸುವುದು) | |

**ಸಂಖ್ಯೆ:ಜಸಂಇ 93 ಎಂಎಲ್ಎ 2025**

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ.